# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 819 |
| 2 | ಸದಸ್ಯರ ಹೆಸರು | : ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 | ಉತ್ತರಿಸುವ ದಿನಾಂಕ | : 26-12-2022 |
| 4 | ಉತ್ತರಿಸುವ ಸಚಿವರು | : ಗೃಹ ಸಚಿವರು |

| ಪ್ರಶ್ನೆ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| (ಅ) | ಕರ್ನಾಟಕ ರಾಜ್ಯದಲ್ಲಿ ಜಿಲ್ಲಾವಾರು ಮತ್ತು ಕಮೀಷನರೇಟ್ ವ್ಯಾಪ್ತಿಯಲ್ಲಿ ಭರ್ತಿ ಮಾಡಬೇಕಾದ ಪಿ.ಎಸ್.ಐ ಹುದ್ದೆಗಳ ಸಂಖ್ಯೆ ಎಷ್ಟು; (ವಿವರ ನೀಡುವುದು) | ಅನುಬಂಧ 'ಅ' ರಲ್ಲಿ ನೀಡಿದೆ. |
| (ಆ) | ಪ್ರಸ್ತುತ ಜಿಲ್ಲಾವಾರು ಮತ್ತು ಕಮೀಷನರೇಟ್ ವ್ಯಾಪ್ತಿಯಲ್ಲಿ ಖಾಲಿಯಿರುವ ಪಿ.ಎಸ್.ಐ ಹುದ್ದೆಗಳ ಸಂಖ್ಯೆ ಎಷ್ಟು;(ವಿವರ ನೀಡುವುದು) | ಅನುಬಂಧ 'ಆ' ರಲ್ಲಿ ನೀಡಿದೆ. |
| (ಇ) | ಕರ್ನಾಟಕ ರಾಜ್ಯದ ಪೊಲೀಸ್ ಡಿ.ಜಿ ರವರು ಪೊಲೀಸ್ ಇಲಾಖೆಯಲ್ಲಿ ಮುಂಬಡ್ತಿ ನೀಡುವ ಕುರಿತು ಸುತ್ತೋಲೆ ಹೊರಡಿಸಿದ ನಂತರ ಮುಂಬಡ್ತಿ ಇಲ್ಲದೇ ನಿವೃತ್ತಿ ಹೊಂದಿದ ಪೊಲೀಸ್ ಸಿಬ್ಬಂದಿಗಳ ಸಂಖ್ಯೆ ಎಷ್ಟು? | ಇಲಾಖೆಯಲ್ಲಿ ಕಾಲಕಾಲಕ್ಕೆ ಉಂಟಾಗುವ ರಿಕ್ತಸ್ಥಾನಗಳಿಗೆ ಮುಂಬಡ್ತಿಗಳನ್ನು ನೀಡಲಾಗುತ್ತಿರುತ್ತದೆ. ಆದರೆ, ಮುಂಬಡ್ತಿ ಇಲ್ಲದೇ ನಿವೃತ್ತಿ ಹೊಂದಿದ ಕುರಿತು ಯಾವುದೇ ಪ್ರಕರಣಗಳು ಇರುವುದಿಲ್ಲ. |
| (ಉ) | ಕರ್ನಾಟಕ ರಾಜ್ಯದ ಪೊಲೀಸ್ ಇಲಾಖೆಯಲ್ಲಿ ಅನುಸರಿಸುತ್ತಿರುವ ಮುಂಬಡ್ತಿಯ ನಿಯಮಗಳಾವುವು; ಬಹಳ ವರ್ಷಗಳು ಸೇವೆ ಸಲ್ಲಿಸಿದ ಹಲವಾರು ಪೊಲೀಸ್ ಸಿಬ್ಬಂದಿಗಳು ಮುಂಬಡ್ತಿಯಿಲ್ಲದೆ ನಿವೃತ್ತಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಈ ಕುರಿತು ಸರ್ಕಾರ ಏನು ಕ್ರಮ ವಹಿಸಿದೆ; (ವಿವರ ನೀಡುವುದು) | ಪೊಲೀಸ್ ಇಲಾಖೆಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಮುಂಬಡ್ತಿ ನೀಡಲಾಗುತ್ತಿರುತ್ತದೆ ಹಾಗೂ ನಿಯಮಗಳನುಸಾರ ನಿಗಧಿಪಡಿಸಲಾದ ಇಲಾಖಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಚಾಲ್ತಿ ಶಿಕ್ಷೆ, ಇಲಾಖಾ ವಿಚಾರಣೆ ಬಾಕಿ ಇಲ್ಲದೆ ಮುಂಬಡ್ತಿಗೆ ಅರ್ಹರಿದ್ದೂ ಮುಂಬಡ್ತಿಯಿಲ್ಲದೇ ನಿವೃತ್ತಿಯಾಗುತ್ತಿರುವ ಕುರಿತು ಯಾವುದೇ ಪ್ರಕರಣಗಳು ಇಲಾಖೆ ಗಮನಕ್ಕೆ ಬಂದಿರುವುದಿಲ್ಲ. |
| (ಊ) | ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ಸುಧಾರಣೆ ಕುರಿತು ಸರ್ಕಾರ ಏನು ಕ್ರಮ ಜರುಗಿಸಿದೆ? (ವಿವರ ನೀಡುವುದು) | ಅನುಬಂಧ – 'ಇ' ರಲ್ಲಿ ನೀಡಿದೆ. |

ಸಂಖ್ಯೆ: ಒಇ 171 ಪಿಇಐ 2022

(ಆರಗ ಜ್ಞಾನೇಂದ್ರ)
ಗೃಹ ಸಚಿವರು

# ಅನುಬಂಧ – ಅ

| ಕ್ರ.ಸಂ. | ಘಟಕ/ವಲಯ/ಕಮೀಷನರೇಟ್ | ಭರ್ತಿ ಮಾಡಬೇಕಾದ ಹುದ್ದೆಗಳ ಸಂಖ್ಯೆ | ಷರಾ |
|---|---|---|---|
| 1 | ಬೆಂಗಳೂರು ನಗರ | 349 | 319 ಹುದ್ದೆಗಳನ್ನು ಅಧಿಸೂಚಿಸಲಾಗಿದೆ. |
| 2 | ಮೈಸೂರು ನಗರ | 0 | |
| 3 | ಮಂಗಳೂರುನಗರ | 5 | |
| 4 | ಹುಬ್ಬಳ್ಳಿ-ಧಾರವಾಡ ನಗರ | 9 | |
| 5 | ಬೆಳಗಾವಿ ನಗರ | 5 | |
| 6 | ಕಲಬುರಗಿ ನಗರ | 25 | 25 ಹುದ್ದೆಗಳನ್ನು ಅಧಿಸೂಚಿಸಲಾಗಿದೆ. |
| 7 | ಕೇಂದ್ರವಲಯ, ಬೆಂಗಳೂರು | 125 | 121 ಹುದ್ದೆಗಳನ್ನು ಅಧಿಸೂಚಿಸಲಾಗಿದೆ. |
| 8 | ಪೂರ್ವವಲಯ, ದಾವಣಗೆರೆ | 68 | 34 ಹುದ್ದೆಗಳನ್ನು ನಿಯಮ 32ರಡಿಯಲ್ಲಿ ಭರ್ತಿ ಮಾಡಲಾಗಿದೆ. |
| 9 | ಪಶ್ಚಿಮವಲಯ, ಮಂಗಳೂರು. | 52 | 39 ಹುದ್ದೆಗಳನ್ನು ಅಧಿಸೂಚಿಸಲಾಗಿದೆ. |
| 10 | ಉತ್ತರವಲಯ, ಬೆಳಗಾವಿ. | 94 | 94 ಹುದ್ದೆಗಳನ್ನು ಅಧಿಸೂಚಿಸಲಾಗಿದೆ. |
| 11 | ದಕ್ಷಿಣವಲಯ, ಮೈಸೂರು | 86 | 86 ಹುದ್ದೆಗಳನ್ನು ಅಧಿಸೂಚಿಸಲಾಗಿದೆ. |
| 12 | ಈಶಾನ್ಯವಲಯ, ಕಲಬುರಗಿ | 10 | |
| 13 | ಬಳ್ಳಾರಿ ವಲಯ, ಬಳ್ಳಾರಿ | 90 | 68 ಹುದ್ದೆಗಳನ್ನು ಅಧಿಸೂಚಿಸಲಾಗಿದೆ. |

# ಅನುಬಂಧ – ಆ

(ಅಧಿಸೂಚಿಸಿದ ನಂತರ ಉಳಿಯುವ ರಿಕ್ತಸ್ಥಾನ)

| ಕ್ರ.ಸಂ. | ಘಟಕ/ವಲಯ/ಕಮೀಷನರೇಟ್ | ಖಾಲಿ ಇರುವ ಹುದ್ದೆಗಳ ಸಂಖ್ಯೆ |
|---|---|---|
| 1 | ಬೆಂಗಳೂರು ನಗರ | 30 |
| 2 | ಮೈಸೂರು ನಗರ | 0 |
| 3 | ಮಂಗಳೂರುನಗರ | 5 |
| 4 | ಹುಬ್ಬಳ್ಳಿ–ಧಾರವಾಡ ನಗರ | 9 |
| 5 | ಬೆಳಗಾವಿ ನಗರ | 5 |
| 6 | ಕಲಬುರಗಿ ನಗರ | 0 |
| 7 | ಕೇಂದ್ರವಲಯ, ಬೆಂಗಳೂರು | 4 |
| 8 | ಪೂರ್ವವಲಯ, ದಾವಣಗೆರೆ | 34 |
| 9 | ಪಶ್ಚಿಮವಲಯ, ಮಂಗಳೂರು. | 13 |
| 10 | ಉತ್ತರವಲಯ, ಬೆಳಗಾವಿ. | 0 |
| 11 | ದಕ್ಷಿಣವಲಯ, ಮೈಸೂರು | 0 |
| 12 | ಈಶಾನ್ಯವಲಯ, ಕಲಬುರಗಿ | 10 |
| 13 | ಬಳ್ಳಾರಿ ವಲಯ, ಬಳ್ಳಾರಿ | 22 |
| | ಒಟ್ಟು: | 132 |

# ಅನುಬಂಧ – ಇ

ಪ್ರಕಾಶ್ ಸಿಂಗ್ ಮತ್ತು ಇತರರು ವಿರುದ್ಧ ಭಾರತ ಸರ್ಕಾರ ಮತ್ತು ಇತರರು ರಿಟ್ ಅರ್ಜಿ ಸಂಖ್ಯೆ: 310/1996ರ ಪ್ರಕರಣದಲ್ಲಿ ಪೊಲೀಸ್ ಸುಧಾರಣೆ ಕುರಿತು ಘನ ಸರ್ವೋಚ್ಛ ನ್ಯಾಯಾಲಯ ನೀಡಲಾದ ನಿರ್ದೇಶನಗಳನ್ನು ಅಳವಡಿಸಿಕೊಂಡ ಕೆಲವೇ ರಾಜ್ಯಗಳಲ್ಲಿ ಕರ್ನಾಟಕವು ಕೂಡ ಒಂದಾಗಿದೆ. ಸದರಿ ನಿರ್ದೇಶನಗಳ ಕುರಿತು ಕೈಗೊಳ್ಳಲಾದ ಕ್ರಮದ ವಿವರ ಕೆಳಕಂಡಂತಿದೆ.

1. **ರಾಜ್ಯ ಭದ್ರತಾ ಆಯೋಗ (State Security Commission):**
ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ/61/ಪೊಸಿ/2009, ದಿನಾಂಕ: 14.07.2009 ರನ್ವಯ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ರಾಜ್ಯ ಭದ್ರತಾ ಆಯೋಗವನ್ನು ಸೃಜಿಸಲಾಗಿದೆ.

2. **ಕನಿಷ್ಠ ಸೇವಾ ಅವಧಿ (Minimum Tenure):**
ಕಾರ್ಯಕಾರಿ ಹುದ್ದೆಗಳಲ್ಲಿ ಕೆಲಸ ನಿರ್ವಹಿಸುವ ಅಧಿಕಾರಿ/ಸಿಬ್ಬಂದಿಗಳ ಕನಿಷ್ಠ ಸೇವಾ ಅವಧಿಯನ್ನು 01 ವರ್ಷವೆಂದು ನಿಗಧಿ ಪಡಿಸಲಾಗಿದೆ.

3. **ಅಪರಾಧ ತನಿಖೆ ಮತ್ತು ಕಾನೂನು ಸುವ್ಯವಸ್ಥೆ ಕರ್ತವ್ಯಗಳನ್ನು ಬೇರ್ಪಡಿಸುವುದು (Seperation of Investigation and Law and Order duties)**
ಕಾನೂನು ಸುವ್ಯವಸ್ಥೆ ಮತ್ತು ಅಪರಾಧ ಪ್ರಕರಣಗಳ ತನಿಖೆ ಕರ್ತವ್ಯಗಳನ್ನು ಬೇರ್ಪಡಿಸುವ ನಿಟ್ಟಿನಲ್ಲಿ ಅಪರಾಧ ಅಂಕಿ-ಅಂಶಗಳನ್ನು ಆಧಾರವಾಗಿಟ್ಟುಕೊಂಡು ಪ್ರತಿ ಪೊಲೀಸ್ ಠಾಣೆಗೆ ಕನಿಷ್ಠ 02 ಪಿ.ಎಸ್.ಐ ಹುದ್ದೆಗಳನ್ನು ಸೃಜಿಸಲಾಗಿರುತ್ತದೆ.

4. **ಪೊಲೀಸ್ ಸಿಬ್ಬಂದಿ ಮಂಡಳಿ (Police Establishment Board):**
ಪೊಲೀಸ್ ಅಧಿಕಾರಿ/ಸಿಬ್ಬಂದಿಯವರ ಸೇವಾ ವಿಷಯಗಳ ನಿರ್ವಹಣೆಗಾಗಿ ಪೊಲೀಸ್ ಸಿಬ್ಬಂದಿ ಮಂಡಳಿಯನ್ನು ರಚಿಸಲಾಗಿದೆ.

5. **ಪೊಲೀಸ್ ದೂರು ಪ್ರಾಧಿಕಾರ (Police Complaint Authority):**
ರಾಜ್ಯ ಮತ್ತು ಜಿಲ್ಲಾ ಪೊಲೀಸ್ ದೂರು ಪ್ರಾಧಿಕಾರಗಳನ್ನು ಸ್ಥಾಪಿಸಲಾಗಿದೆ.

ಪೊಲೀಸಿಂಗ್ ಸುಧಾರಣೆ ಕುರಿತು ಕೇಂದ್ರ ಗೃಹ ಮಂತ್ರಾಲಯದ ಬಿ.ಪಿ.ಆರ್&ಡಿ ಸಂಸ್ಥೆಯಿಂದ ಸ್ವೀಕರಿಸಲಾಗುವ ಸಂಶೋಧನಾ ಫಲಿತಾಂಶಗಳನ್ನು ಪರಿಶೀಲಿಸಿ ಸೂಕ್ತವಾಗಿ ಇಲಾಖೆಯಲ್ಲಿ ಅಳವಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಅಪರಾಧ ತನಿಖೆ, ಅಪರಾಧ ತಡೆಗಟ್ಟುವಿಕೆ, ಕಾನೂನು ಸುವ್ಯಸ್ಥೆ ಕುರಿತು ಘನ ಸರ್ವೋಚ್ಛ ನ್ಯಾಯಾಲಯ, ಉಚ್ಛ ನ್ಯಾಯಾಲಯ, ರಾಷ್ಟ್ರೀಯ/ರಾಜ್ಯ ಮಹಿಳಾ ಆಯೋಗ, ರಾಷ್ಟ್ರೀಯ/ರಾಜ್ಯ ಮಾನವ ಹಕ್ಕುಗಳ ಆಯೋಗ, ರಾಷ್ಟ್ರೀಯ/ರಾಜ್ಯ ಅಲ್ಪ ಸಂಖ್ಯಾತರ ಆಯೋಗ ಮತ್ತು ಸಂವಿಧಾನದ ಮಾನ್ಯತೆ ಪಡೆದ ಇತರೆ ಶಾಸನ ಬದ್ಧ ಸಂಸ್ಥೆಗಳು ಕಾಲ-ಕಾಲಕ್ಕೆ ನೀಡುವ ನಿರ್ದೇಶನಗಳನ್ನು ಅಳವಡಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ.

ರಾಜ್ಯದಲ್ಲಿನ ಪೊಲೀಸ್ ಠಾಣೆಗಳಲ್ಲಿ ದಾಖಲಾಗುವ ಅಪರಾಧ ಪ್ರಕರಣಗಳ ತನಿಖೆ ಹಾಗೂ ಪ್ರಕರಣಗಳನ್ನು ತ್ವರಿತವಾಗಿ ಇತ್ಯಾರ್ಥಪಡಿಸುವಲ್ಲಿ ಸಹಕಾರಿಯಾಗುವುದಕ್ಕೆ ಹೆಚ್ಚುವರಿಯಾಗಿ 850 ಪಿ.ಎಸ್.ಐ ಹುದ್ದೆಗಳನ್ನು ಸೃಜಿಸಲಾಗಿರುತ್ತದೆ.

ರಾಜ್ಯದಲ್ಲಿ ದಾಖಲಾಗುವ ಅಪರಾಧ ಪ್ರಕರಣಗಳಿಗೂ ಹಾಗೂ ಪೊಲೀಸ್ ಠಾಣೆಗಳಲ್ಲಿನ ತನಿಖಾಧಿಕಾರಿಗಳ ಮಂಜೂರಾತಿ ಬಲದಲ್ಲಿ ವ್ಯತ್ಯಾಸ ಕಂಡುಬಂದ ಹಿನ್ನೆಲೆಯಲ್ಲಿ ಕೆಳಕಂಡಂತೆ ಅಪರಾಧ ಅಂಕಿ-ಅಂಶಗಳನ್ನು ಆಧಾರವಾಗಿಟ್ಟುಕೊಂಡು ಪ್ರತಿ ಪೊಲೀಸ್ ಠಾಣೆಗೆ ಕನಿಷ್ಠ 02 ಪಿ.ಎಸ್.ಐ. ರವರಂತೆ ಹುದ್ದೆಗಳನ್ನು ಹಂಚಿಕೆ ಮಾಡಲಾಗಿರುತ್ತದೆ.

| ಕ್ರ ಸಂ | ಅಪರಾಧ ಪ್ರಕರಣಗಳ ಅಂಕಿ-ಅಂಶ | ಅವಶ್ಯವಿರುವ ಅಧಿಕಾರಿಗಳ ವಿವರ |
|---|---|---|
| 1 | 1 ರಿಂದ 300 | 2 ಪಿಎಸ್‌ಐ |
| 2 | 300 ರಿಂದ 500 | 4 ಪಿಎಸ್‌ಐ |
| 3 | 500 ರಿಂದ 700 | 6 ಪಿಎಸ್‌ಐ |
| 4 | 700 ರಿಂದ ಮೇಲ್ಪಟ್ಟು | 8 ಪಿಎಸ್‌ಐ |

ಹಂಚಿಕೆ ಮಾಡಲಾದ ನಂತರ 04 ಮತ್ತು 06 ಪಿ.ಎಸ್.ಐ ಗಳಿರುವ ಪೊಲೀಸ್ ಠಾಣೆಗಳ ಮೇಲುಸ್ತುವಾರಿಗಾಗಿ ಪೊಲೀಸ್ ಇನ್ಸ್‌ಪೆಕ್ಟರ್ ಹುದ್ದೆಗಳನ್ನು ಸೃಜಿಸಿ, ಸದರಿ ಪೊಲೀಸ್ ಠಾಣೆಗಳನ್ನು ಪಿ.ಐ, ಎಸ್.ಹೆಚ್.ಓ ಠಾಣೆಗಳನ್ನಾಗಿ ಪರಿವರ್ತಿಸುವ ಅವಶ್ಯಕತೆ ಇರುವುದರಿಂದ ಅಪರಾಧ ಪ್ರಕರಣಗಳ ತನಿಖೆ ಹಾಗೂ ಕಾನೂನು ಸುವ್ಯವಸ್ಥೆಯ ದಕ್ಷ ನಿರ್ವಹಣೆ ದೃಷ್ಟಿಯಿಂದ ಇದುವರೆವಿಗೂ 185 ಪೊಲೀಸ್ ಠಾಣೆಗಳನ್ನು ಪಿ.ಐ ಪೊಲೀಸ್ ಠಾಣೆಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿರುತ್ತದೆ.

ಅದೂ ಅಲ್ಲದೇ ಹೊಸದಾಗಿ 08 ಸಿ.ಇ.ಎನ್ ಪೊಲೀಸ್ ಠಾಣೆ, 04 ಸಂಚಾರ ಪೊಲೀಸ್ ಠಾಣೆ, 09 ಪೊಲೀಸ್ ಉಪ-ವಿಭಾಗಗಳು ಮತ್ತು 04 ಪೊಲೀಸ್ ವೃತ್ತಗಳನ್ನು ಸೃಜಿಸಲಾಗಿರುತ್ತದೆ.